†ಶ್ರೀ ಆಲೂರು ಹನುಮಂತಪ್ಪ.—ಇದುವರೆಗೂ ಕೆರೆಗಳೆಲ್ಲಾ ರೆವಿನ್ಯು—ಇರಿಗೇಷನ್ ಮೇಂಟೇನ್ ಮಾಡಿದ ಕೆರೆಗಳಾಗಿದ್ದವು. ಇತ್ತೀಚೆಗೆ ಅಕ್ಕು ಪಾಸ್ ಮಾಡಿದ್ದೇವೆ, ಮೇಂಟಿನೆನ್ಸ್ ಸೆಸ್ ಜಾರಿ ಮಾಡಿದ್ದೇವೆ. ಇನ್ನುಮೇರೆ ಆ ಕೆಲಸಗಳನ್ನು ಮಾಡಬೇಕಾಗಿದೆ.

ಶ್ರೀ ಎಸ್. ಪಿ. ಫಾಯಿದೆ.—ಒಂದು ಫೇಸ್ ಪ್ಲಾನ್ ಮಾಡಿಕೊಂಡು ಈ ಕೆರೆಗಳನ್ನೆಲ್ಲಾ ರೆಸ್ಟೋರ್ ಮಾಡಲಕ್ಕೆ ಇನ್ನು ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—ಕೆರೆಗಳು ಒಡೆದ ತಕ್ಷಣ ರಿಪೇರಿ ಮಾಡಬೇಕಾದ್ದು ಪ್ರಾಮುಖ್ಯವಾದ ಕೆಲಸ. ತೂಬುಗಳನ್ನು ಸರಿಮಾಡತಕ್ಕಂಥಾದ್ದು, ಚಾನಲ್ಲುಗಳನ್ನು ಸರಿಮಾಡ ತಕ್ಕಂಥಾದ್ದು, ಈ ಕೆಲಸವನ್ನೆಲ್ಲಾ ಮಾಡಿದೆ. ರೆಷ್ಟೂರೇಶನ್ ಮಾಡಬೇಕಾಗಿದ್ದರೆ ಯಾವರೀತಿ ಮಾಡಬೇಕು ಎಂದು ಅನೇಕ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಅನೇಕರು ಡಿಸಿಲ್ಟಿಂಗ್ ಮಾಡಬೇಕು ಎಂದು ಹೇಳಿದ್ದಾರೆ. ಎಲ್ಲ ಅಭಿಪ್ರಾಯಗಳನ್ನೂ ಗಣನೆಗೆ ತೆಗೆದುಕೊಂಡು ರಿಪೇರಿ ಕೆಲಸಗಳಿಗೆ ಒಂದು ಪ್ರೋಗ್ರಾಂ ಹಾಕಿಕೊಳ್ಳುತ್ತೇವೆ.

Sanction of Loans for Irrigation Wells.

*Q.—210. Sri K. P. REVANNASIDDAPPA (Tiptur).—

Will the Government be pleased to state:—

(*a*) the number of irrigation wells for which loans have been sanctioned in Tiptur Sub-Division during 1962-63, 1963-64 and 1964-65;

(*b*) out of which number of wells completed;

(*c*) the number of wells that are not completed with reasons therefor;

(*d*) whether full payments are made in cases of completed wells for which irrigation loans have been sanctioned and if not, the reasons thereof;

(*e*) the number of irrigation wells in respect of which recovery of loans has been ordered by the competent authority in Tiptur Sub-Division and reasons thereof ?

A.—Sri M. V. KRISHNAPPA (Minister for Revenue).—

(*a*) *Year*	*No. of wells sanctioned.*
1952-63	264
1963-64	85
1964-65	178.

(*b*) 169.

(*c*) 358; of these, 178 wells have been sanctioned in March, 1965 and 180 wells have been remained incomplete on account of non-availability of building materials at reasonable cost, insufficiency of financial aid secured, lack of skilled labour and in some cases encounter with hard rock.

(*d*) Yes, except in three cases. In one case the well has been sunk in the Gramatana. In the remaming two cases, extension of time limit for completion of the wells has not been sanctioned by the competent authority.

(SRI M. V. KRISHNAPPA)

(*e*) 29 ; of these, in 23 cases recovery of loan has been ordered for not having started the work. In 1 case, the well has been sunk in the Gramatana. In 3 cases, the well works were found to be old ones. In two cases, the conditions of the grant have been violated.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತೀವ್ರತರ ಆಹಾರ ಉತ್ಪತ್ತಿ ಮಾಡಬೇಕೆಂದು ಹೇಳುತ್ತೀರಿ. ಇದು ಎಲ್ಲಾ ಬಾವಿಗಳನ್ನು ತೋಡದೆ, ಪಂಪುಸೆಟ್ಟುಗಳನ್ನು ಹಾಕದೆ ಆಗಬೇಕು ಎಂದು ಹೇಳುತ್ತೀರೊ ? ಒಂದು ವರ್ಷದಲ್ಲಿ ಇಷ್ಟೊಂದು ಅಪ್ಲಿಕೇಷನ್ನುಗಳಿದ್ದೂ, ಅದಕ್ಕೆ ಮಂಜೂರಾತಿ ಕೊಡುವುದರಲ್ಲಿ ವಿಳಂಬವಾಗಿರುವುದಕ್ಕೆ ಕಾರಣವೇನು ?

† ಶ್ರೀ ಎಂ. ವಿ. ಕೃಷ್ಣಪ್ಪ.—ದುಡ್ಡು ಇಲ್ಲದ್ದಕ್ಕೋಸ್ಕರ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ದುಡ್ಡು ಇಲ್ಲದೆ ಆಹಾರ ಹೆಚ್ಚಿಗೆ ಬೆಳೆಯಿರಿ ಅಂತ ಹೇಳುವುದು ಯಾವ ತರಹ ನೀತಿ ? ಇವರು ಕೊಡುವುದು ಸಾಲ ಮಾತ್ರ.

ಶ್ರೀ ಎಂ. ವಿ. ಕೃಷ್ಣಪ್ಪ —ಈಗ ದುಡ್ಡು ಕೊಟ್ಟೇ, ಆಹಾರ ಹೆಚ್ಚಿಗೆ ಬೆಳೆಯಿರಿ ಎಂದು ಹೇಳುತ್ತಾ ಇರುವುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ತುರ್ತು ಪರಿಸ್ಥಿತಿಯಲ್ಲಿ ಮುಖ್ಯವಾಗಿ ಆಹಾರ ಬೆಳೆಯುವುದಕ್ಕೆ ಇಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಬಾವಿಗಳನ್ನು ತೆಗೆಯುವುದಕ್ಕೆ, ಮುಗಿಸುವುದಕ್ಕೆ ಧಾರಾಳವಾಗಿ ಸಾಲ ಕೊಡದಿದ್ದರೆ ಇವತ್ತು ಆಹಾರ ಬೆಳೆಯುವುದಕ್ಕೆ ಸಾಧ್ಯವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದಿನಿಂದ ಬಾವಿಗಳಿಗೋಸ್ಕರ ಹಣ ಕೊಟ್ಟುಕೊಂಡು ಬಂದಿದ್ದೇವೆ. ನುಮಾರು 10 ಲಕ್ಷ ರೂಪಾಯಿಯನ್ನು ಈ 3-4 ವರ್ಷಗಳಲ್ಲಿ ಕೊಡುತ್ತಾ ಬಂದಿದ್ದೇವೆ. ಈಗ ಈ ದೇಶದ ತುರ್ತುಪರಿಸ್ಥಿತಿಯಲ್ಲಿ ಹೆಚ್ಚಿಗೆ ಬಾವಿಗಳನ್ನು ಅಗೆಯಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಅವರ ಉತ್ತರದಲ್ಲಿ ಹೇಳಿದ್ದಾರೆ. ಬಹುಶ : ಇನ್ನು ಮುಂದೆ ರೈತರಿಗೆ ಹೆಚ್ಚಿಗೆ ಹಣ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮಾನ್ಯ ಮಂತ್ರಿಗಳು ಹೇಳುತ್ತಲೇ ಇದ್ದಾರೆ : ಬಾವಿಗಳನ್ನು ಜಾಸ್ತಿ ಆಗೆಯಬೇಕು ಎಂದು. ನಾನು ನಿನ್ನೆ ಹನ್ನೊಂದೂವರೆ ಗಂಟೆಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಹೋಗಿದ್ದೆ ; ಅಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ದುಡ್ಡು ಕೊಟ್ಟಿಲ್ಲವೆಂತ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಬ್ಯಾಂಕಿನ ಮೇಲೆ ಬಹಳ ಜವಾಬ್ದಾರಿ ಬಿದ್ದಿದೆ ಎಂದು ಹೇಳಿದ್ದರು ಅನ್ನುವುದನ್ನೂ ಹೇಳಿದರು. ಹೀಗಿದ್ದೂ ಇವತ್ತಿನ ದಿವಸ ಜಾಗ್ರತೆ ಅವರಿಗೆ ಬಾವಿಗಳಿಗೆ ದುಡ್ಡು ಏಕೆ ಕೊಟ್ಟಿಲ್ಲ ? ದುಡ್ಡು ಕೊಟ್ಟಿಲ್ಲವೆಂದು ರೈತರು ನೇರವಾಗಿ ನಮ್ಮಲ್ಲಿಗೆ ಬಂದಿದ್ದರು. ಹೀಗಾದರೆ ಆಹಾರೋತ್ಪತ್ತಿ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿದ ಹಾಗಾಯಿತೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನೀವು ಭಯಪಡಬೇಕಾಗಿಲ್ಲ. ನಮ ಜನಗಳು, ನಾವು ನೋಡಿಕೊಳ್ಳುತ್ತೇವೆ. ಜನಗಳು ನಮ್ಮ ಹತ್ತಿರವೂ ಬಂದಿದ್ದರು.

Construction of a dam Across Hemavathy River near Gorur.

*Q.—238. SRI T. N. MADAPPA GOWDA (Nagamangala).—

Will the Government be pleased to state :—

(*a*) whether the survey for the construction of a dam across Hemavathy river near Gorur is completed ;

(*b*) If so—

(i) the estimated cost of this project ;
(ii) the estimated commandable atchkat ;
(iii) the area coming under submersion ;
(iv) the impounding capacity of the dam ;